(ಇಂದು ದಿನಾಂಕ 20-09-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ - ವಾದಿ ಪರ ಶ್ರೀ ಪಿ.ಎನ್.ಎಚ್. ವಕೀಲರಿಂದ-**

ನಾನು ಇಂದು ಮಧ್ಯಂತರ ಅರ್ಜಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದ್ರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಯನ್ನಾಗಿ ಗುರುತಿಸಲಾಗಿದೆ.

ನಿಶಾನೆ ಪಿ. 39 - ಗ್ರಾಮ ಸಭೆಯಲ್ಲಿ ಪ್ರತಿವಾದಿಯರು ಬರೆದುಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯ ದೃಢೀಕೃತ ನಕಲು.

ನಿಶಾನೆ ಪಿ. 40 - ನಾಗಪ್ಪ ಪಟಗಾರ ಬರೆದುಕೊಟ್ಟಿದ್ದಾನೆ ಎನ್ನಲಾದ ಹೇಳಿಕೆಯ ದೃಢೀಕೃತ ನಕಲು

ನಿಶಾನೆ ಪಿ. 41 - ಎಂ.ಇ. ನಂ. 2571 ದಿನಾಂಕ 19-11-1955 ರ ದೃಢೀಕೃತ ನಕಲು

ನಿಶಾನೆ ಪಿ. 42 - ಬಾಬು ಪಟಗಾರ ಬರೆದುಕೊಟ್ಟಿದ್ದಾನೆ ಎನ್ನಲಾದ ಹೇಳಿಕೆಯ ದೃಢೀಕೃತ ನಕಲು

ನಿಶಾನೆ ಪಿ. 43 - ವಾದಿಯರು ಕಾಗಲ್ ಪಿ.ಡಿ.ಓ ಇವರಿಗೆ ಸಲ್ಲಿಸಿದ ಅರ್ಜಿ ದಿನಾಂಕ 09-06-2016 ರ ಸ್ವೀಕೃತ ಪ್ರತಿ

ನಿಶಾನೆ ಪಿ. 44 - ತಾಲೂಕು ಪಂಚಾಯತಿಯವರು 3 ನೇ ವಾದಿಗೆ ಕಳುಹಿಸಿದ ನೋಟಿಸಿನ ಪ್ರತಿ

ನಿಶಾನೆ ಪಿ. 45 - ಕಾರವಾರ ಜಿಲ್ಲಾಧಿಕಾರಿಯವರು ವಾದಿಯರಿಗೆ ಕಳುಹಿಸಿದ ನೋಟಿಸಿನ ಪ್ರತಿ

ನಿಶಾನೆ ಪಿ. 46 - ಕಾಗಲ್ ಪಿ.ಡಿ.ಓ. ರವರು ವಾದಿಯರಿಗೆ ಕಳುಹಿಸಿದ ನೋಟಿಸಿನ ಪ್ರತಿ

ನಿಶಾನೆ ಪಿ. 47 - ಕಾಗಲ್ ಪಿ.ಡಿ.ಓ. ರವರು 1 ನೇ ಪ್ರತಿವಾದಿಗೆ ಕಳುಹಿಸಿದ ನೋಟಿಸು ದಿನಾಂಕ 11-07-2016 ರ ದ್ವಿ ಪ್ರತಿ

ನಿಶಾನೆ ಪಿ. 48 - ಕಾಗಲ್ ಪಿ.ಡಿ.ಓ. ರವರು 1 ನೇ ಪ್ರತಿವಾದಿಗೆ ಕಳುಹಿಸಿದ ಅಂತಿಮ ನೋಟಿಸು ದಿನಾಂಕ 25-07-2016 ರ ದ್ವಿ ಪ್ರತಿ

ನನ್ನ ಸಾಕ್ಷ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ದಾವೆಯಲ್ಲಿ ಕೇಳಿರುವಂತೆ ಆದೇಶವಾಗಲು ಪ್ರಾರ್ಥನೆ.

**ಪಾಟೀ ಸವಾಲು - ಪ್ರತಿವಾದಿ ನಂ.1 ಮತ್ತು 2 ರವರ ಪರ ಶ್ರೀ ಎಸ್.ಯು.ಎ. ವಕೀಲರಿಂದ-**

**1.** ನನಗೆ ಸಾಕ್ಷ್ಯ ನುಡಿಯಲು 1 ನೇ ವಾದಿ ಮೊಕ್ತ್ಯಾರುನಾಮೆ ಬರೆದುಕೊಟ್ಟಿಲ್ಲ. ನಾನು 1 ನೇ ವಾದಿಯ ಪರವಾಗಿ ಸಾಕ್ಷ್ಯ ನುಡಿಯುತ್ತಿಲ್ಲ. ವಾದಿ ನಂ.2 ಮತ್ತು 3 ರವರಿಗೆ ನ್ಯಾಯಾಲಯಕ್ಕೆ ಬರಲು ಆರೋಗ್ಯದ ತೊಂದರೆ ಇಲ್ಲ . ಸಾಕ್ಷಿ ಮುಂದುವರೆದು 2 ನೇ ವಾದಿಗೆ

ಆರಾಮ ಇಲ್ಲ ಎನ್ನುತ್ತಾರೆ. ಈ ಬಗ್ಗೆ ನಾನು ವೈದ್ಯಕೀಯ ಪ್ರಮಾಣಪತ್ರವನ್ನು ಹಾಜರಪಡಿಸಿಲ್ಲ. ವಾದಿ ನಂ.3 ರವಳ ಮದುವೆ ಮೇ 1973 ರಲ್ಲಿ ಆಗಿರುತ್ತದೆ. ವಾದಿ ನಂ.2 ರವಳ ಮದುವೆ ಅದಕ್ಕಿಂತಲೂ ಸುಮಾರು 10 ವರ್ಷಗಳ ಮೊದಲೇ ಆಗಿರುತ್ತದೆ.

**2.** ಈ ದಾವೆಯನ್ನು ಸಲ್ಲಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ . ವಾದಿ ನಂ. 2 ಮತ್ತು 3 ರವರು ವಕೀಲರಿಗೆ ಮಾಹಿತಿ ನೀಡಿಲ್ಲ. ಸಾಕ್ಷಿ ಮುಂದುವರೆದು ಸದ್ರಿ ವಾದಿಯರ ಅಭಿಪ್ರಾಯದಂತೆ ನಾನು ವಕೀಲರಿಗೆ ಮಾಹಿತಿ ನೀಡಿದ್ದೇನೆ ಎನ್ನುತ್ತಾರೆ. ವಾದಿ ನಂ. 1 ನಮ್ಮ ವಕೀಲರಿಗೆ ಪ್ರತ್ಯೇಕವಾಗಿ ಮಾಹಿತಿ ಕೊಟ್ಟಿದ್ದಾರೆ.

**3.** ದಾವಾ ಆಸ್ತಿಗಳನ್ನು ಭೂನ್ಯಾಯಮಂಡಳಿಯವರು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವು ಒಟ್ಟೂ ಕುಟುಂಬದ ಆಸ್ತಿಗಳಾಗಿವೆ. ಸದ್ರಿ ಆಸ್ತಿಗಳು ರಾಮಯ್ಯ ಪಟಗಾರರ ನಂತರ ಅವರ ಮಕ್ಕಳಾದ ಬಾಬು ಮತ್ತು ನಾಗಪ್ಪ ಇವರಿಗೆ ಬಂದಿರುತ್ತದೆ. ದಿನಾಂಕ 22-10-1991 ರಂದು ಭೂನ್ಯಾಯಮಂಡಳಿಯವರು ಪ್ರತ್ಯೇಕ ಪ್ರತ್ಯೇಕವಾಗಿ ನಾಗಪ್ಪ, 2 ನೇ ಪ್ರತಿವಾದಿ ನಾಗೇಶ, 1 ನೇ ಪ್ರತಿವಾದಿ ಮಾಧವ ಮತ್ತು 1 ನೇ ವಾದಿ ರಾಮಯ್ಯನವರ ಪರವಾಗಿ ಅಧಿಭೋಗದಾರಿಕೆ ಮಂಜೂರು ಮಾಡಿರುತ್ತಾರೆ ಎಂದರೆ ನಾನು ಒಪ್ಪುವುದಿಲ್ಲ. ದಾವಾ ಆಸ್ತಿಗಳು ಯಾವ ನಾತೆಯಲ್ಲಿ ಕುಟುಂಬಕ್ಕೆ ಬಂದಿದೆ ಎಂದು ನಾನು ದಾಖಲೆ ನೋಡಿರುತ್ತೇನೆ. ಸಾಕ್ಷಿದಾರರಿಗೆ ಈಗ ಪ್ರತಿವಾದಿಯರು ಹಾಜರಪಡಿಸಿದ ಭೂನ್ಯಾಯಮಂಡಳಿಯ ಆದೇಶ ದಿನಾಂಕ 22-10-1981 ರ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳು ದಾವಾಸ್ತಿಗೆ ಸಂಬಂಧಪಟ್ಟ ದಾಖಲೆಗಳು ಎಂದು ಒಪ್ಪಿಕೊಂಡ ಕಾರಣ ಸದ್ರಿ ದಾಖಲೆಯನ್ನು ನಿ .ಡಿ.1 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಿ.ಡಿ.1 ರಲ್ಲಿ ದಾವೆಗೆ ಸಂಬಂಧಿಸಿದ ಎಲ್ಲಾ ಆಸ್ತಿಗಳು ಮಂಜೂರು ಆಗಿಲ್ಲ ಎನ್ನುತ್ತಾರೆ . ನಿ.ಡಿ.1 ದಾಖಲೆಯನ್ನು ನಾನು ನನ್ನ ವಕೀಲರಿಗೆ ತೋರಿಸಿದ್ದೆನು . ವಾದಿ ನಂ.1, ಪ್ರತಿವಾದಿ ನಂ. 1 ಮತ್ತು 2 ರವರಿಗೆ ಪ್ರತ್ಯೇಕ ಮನೆಗಳಿಲ್ಲ. ಅವರುಗಳು ಮೂಲ ಮನೆಯಲ್ಲಿ ಪ್ರತ್ಯೇಕವಾಗಿ ಭಾಗ ಮಾಡಿಕೊಂಡು ವಾಸವಿದ್ದಾರೆ . 1 ನೇ ಪ್ರತಿವಾದಿಯ ಮನೆ ನಂಬರ ನೆನಪಿಲ್ಲ.

4. ವಾದ ಪತ್ರದ ನಕಾಶೆಯನ್ನು ನಾನೇ ಮಾಹಿತಿಗಾಗಿ ತಯಾರಿಸಿಕೊಂಡಿರುತ್ತೇನೆ . ಸದ್ರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಸರ್ವೆ ನಕಾಶೆ ನನ್ನ ಬಳಿ ಇದೆ. ಅದನ್ನು ಈ ನ್ಯಾದಲ್ಲಿ ಹಾಜರಪಡಿಸಿಲ್ಲ. ಸದ್ರಿ ವಾದಪತ್ರದ ನಕಾಶೆ ವಸ್ತುಸ್ಥಿತಿಗೆ ಅನುಗುಣವಾಗಿ ಇರುವುದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ